# **<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ</u>**

ದಿನಾಂಕಃ **31.01.2025**

**<u>ಸಿ.ಸಿ.ನಂ. 370/2023</u>**

ಫಿರ್ಯಾದಿಃ ಪಾಂಡವಪುರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ನಾಗರಾಜು ಬಿನ್ ಲೇಃ ನಿಂಗಯ್ಯ,
ಸುಮಾರು 62 ವರ್ಷ,
ವಾಸಃ ಕೆನ್ನಾಳು ಗ್ರಾಮ, ಪಾಂಡವಪುರ ತಾಃ
ಮಂಡ್ಯ.

## **<u>ಆರೋಪಣೆ</u>**

**ಶ್ರೀಮತಿ. ಪಾರ್ವತಮ್ಮ.ಬಿ., ಬಿ.ಎ., ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ದಿನಾಂಕಃ 24.05.2022 ರಂದು ಸಂಜೆ ಸುಮಾರು 4.30 ಗಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-09-ಹೆಚ್ವೈ-0764 ರ ದ್ವಿಚಕ್ರ ವಾಹನದ ಮಾಲೀಕರಾಗಿದ್ದು, ಯಾವುದೇ ಚಾಲನಾ ಪರವಾನಿಗೆ ಹೊಂದಿಲ್ಲದ ಕಾನೂನು ಸಂಘರ್ಷಕ್ಕೊಳಗಾದ ಬಾಲಕನಿಗೆ ತನ್ನ ಬಾಬ್ತು ವಾಹನವನ್ನು ಚಾಲನೆ ಮಾಡಲು ನೀಡಿದ್ದು, ಆ ಮೂಲಕ ಮೋಟರು ವಾಹನ ಕಾಯ್ದೆ ಕಲಂ.181 ಸಹವಾಚಕ ಕಲಂ.5(1) ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.

ಪ್ರಶ್ನೆಃ 1 ಃ ಈಗ ನಿಮಗೆ ಓದಿ ಹೇಳಿದ ಆರೋಪದ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆಃ 2ಃ ಈಗ ನೀನು ಓದಿಸಿಕೊಂಡು ತಿಳಿದ ಆರೋಪಕ್ಕೆ ತಪ್ಪೊಪ್ಪುವೆಯೋ ಅಥವಾ ಅಧಿವಿಚಾರಣೆಯಾಗಲೀ ಎನ್ನುವೆಯೋ?

ಉತ್ತರಃ

(ಆರೋಪಿತನ ಯಥಾವತ್ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯ್ತು.)

**(ಪಾರ್ವತಮ್ಮ.ಬಿ.)**
**ಸಿವಿಲ್ ಜೆಡ್ಜ್ ಮತ್ತು ಜೆಎಂಎಫ್‌ಸಿ**
**ಪಾಂಡವಪುರ.**

ಆರೋಪಿ ಸಹಿಃ